# **ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ನಂಜನಗೂಡು**

## **ಸಿಸಿ ಸಂಖ್ಯೆ : 81/2018**

ಫಿರ್ಯಾದುದಾರರು : ಹುಲ್ಲಹಳ್ಳಿ ಪೊಲೀಸ್ ಠಾಣೆ, ನಂಜನಗೂಡು.

**ವಿರುದ್ಧ**

ಆರೋಪಿತರು : ಸುರೇಶ ಬಿನ್ ಕುಳ್ಳೇಗೌಡ,
ವಯಸ್ಸು ಸುಮಾರು 40 ವರ್ಷ,
ವಾಸಃ ಎಂ. ಕೊಂಗಳ್ಳಿ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

:: **ದೋಷಾರೋಪಣೆ** ::

*ಶ್ರೀ ರಘುರಾಮ ಎನ್. ಎಸ್.,* ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಗಳನ್ನು ನಿರೂಪಿಸುತ್ತಿದ್ದೇನೆ.

ದಿನಾಂಕ 03.08.2016 ರಂದು ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ನಂಜನಗೂಡಿನ ಹುಲ್ಲಹಳ್ಳಿ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕಗ್ಗಲೂರು ಗ್ರಾಮದ ಎಲ್ಲೆಗೆ ಸೇರಿದ ಸರ್ವೆ ನಂಬರ್.16 ರ ಜಮೀನಿನ ತೆವರಿಯಲ್ಲಿ ಚಾಸಾ-1 ರವರು ದನ ಕರುಗಳನ್ನು ಮೇಯಿಸುತ್ತಿದ್ದಾಗ, ಆರೋಪಿತರಾದ ತಾವು ಚಾಸಾ-1 ರವರ ಜಮೀನಿಗೆ ಅಕ್ರಮ ಪ್ರವೇಶ ಮಾಡಿದ್ದರಿಂದ ತಾವು ಭಾರತೀಯ ದಂಡ ಸಂಹಿತೆ ಕಲಂ 447 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎರಡನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ತಾವು ಜಗಳ ತೆಗೆದು, ಚಾಸಾ-1 ರವರ ಬಲದ ಕೈಯನ್ನು ಏಕಾ ಏಕಿಯಾಗಿ

ಹಿಡಿದುಕೊಂಡು ಎಲ್ಲಿಗೂ ಹೋಗಲು ಬಿಡದೆ ಚಾಸಾ-1 ರವರಿಗೆ ಅಕ್ರಮ ತಡೆಯುಂಟು ಮಾಡಿರುವ ಕಾರಣ ತಾವು ಭಾರತೀಯ ದಂಡ ಸಂಹಿತೆ ಕಲಂ 341 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೂರನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ತಾವು ಜಗಳ ತೆಗೆದು, ಚಾಸಾ-1 ರವರನ್ನು ಏಕಾ ಏಕಿ ಹಿಡಿದುಕೊಂಡು ಚಾಸಾ-1 ರವರ ಸೀರೆಯನ್ನು ಎಳೆದು ಆಕೆಗೆ ಮಾನಭಂಗ ಮಾಡುವ ಉದ್ದೇಶದಿಂದ ಅಪರಾಧಿಕ ಬಲ ಪ್ರಯೋಗ ಮಾಡಿದ್ದರಿಂದ ತಾವು ಭಾರತ ದಂಡ ಸಂಹಿತೆಯ ಕಲಂ 354 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ನಾಲ್ಕನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ತಾವು ಜಗಳ ತೆಗೆದು, ಚಾಸಾ-1 ರವರು ಕೂಗಿ ಕೊಂಡಾಗ ಚಾಸಾ-1 ರವರ ಬಾಯಿಯನ್ನು ಎಡದ ಕೈಯಿಂದ ಮುಚ್ಚಿಕೊಂಡು ಚಾಸಾ-1 ರವರ ಜಮೀನಿನಲ್ಲಿ ಬಿದ್ದಿದ್ದ ಕುಡುಗೋಲನ್ನು ಎತ್ತಿಕೊಂಡು ಚಾಸಾ-1 ರವರ ಹಣೆಯ ಎಡಭಾಗದ ಮೇಲ್ಭಾಗಕ್ಕೆ ಹಾಗೂ ತಲೆಯ ಭಾಗಕ್ಕೆ ಹೊಡೆದು ನೋವುಂಟು ಮಾಡಿದ್ದರಿಂದ ತಾವು ಭಾರತೀಯ ದಂಡ ಸಂಹಿತೆ ಕಲಂ 324 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೇಲ್ಕಂಡ ನಿಮ್ಮ ಮೇಲಿನ ಆರೋಪಣೆಯ ಬಗ್ಗೆ ವಿಚಾರಣೆಯಾಗಲು ಈ ಮೂಲಕ ಆದೇಶಿಸುತ್ತೇನೆ.

(ರಘುರಾಮ ಎನ್.ಎಸ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ನಂಜನಗೂಡು.